# ಕವಿಮಾರ್ಗ

## ದೀಪಾವಳಿ ವಿಶೇಷಾಂಕ

ಸಾಹಿತ್ಯಿಕ, ಸಾಂಸ್ಕೃತಿಕ ತ್ರೈಮಾಸಿಕ ISSN – 2395-0978 – KAVIMARGA

ಸಂಪುಟ-೧೨, ಸಂಚಿಕೆ-೦೩, ೦೪ (ಸಂಯುಕ್ತ ಸಂಚಿಕೆ) ಜುಲೈ - ಡಿಸೆಂಬರ್, ೨೦೧೮



ಕಲೆ : ಡಾ. ಸತೀಶಕುಮಾರ ಪಿ. ವಲ್ಲೇಪುರೆ

# Kavimarga

**(July–December, 2018; Vol -12, Issue-3-4)**

Literary Cultural Qwarterly Journal

**ISSN – 2395-0978 – KAVIMARGA**

Published by : **Kavimarga Prakashana**
"Tejashvini" Saraswatipur
Post : Gulabarga University, Kalaburgi
Pin: 585106

DTP : Vachan Chetan Computers Bidar; 9916424411

Printed at : Sneha Printers, Bengaluru, 9845062549

Cover design : Dr. Satishkumar P. Wallepure
(ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ: ೨೦೧೭-೧೮
ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕಲಾಕೃತಿ:


**ಕವಿಮಾರ್ಗ ಪತ್ರಿಕೆಯ ಚಂದಾ ವಿವರ**

ಪಂಚ ವಾರ್ಷಿಕ : ರೂ. ೧೧೦೦=೦೦

ವಾರ್ಷಿಕ : ರೂ. ೨೫೦=೦೦

ಸಂಯುಕ್ತ ಅರ್ಧವಾರ್ಷಿಕ ಸಂಚಿಕೆ : ರೂ. ೧೫೦=೦೦


**ಸಂಪರ್ಕ ವಿಳಾಸ :**

ಡಾ. ಕಲ್ಯಾಣರಾವ ಜಿ. ಪಾಟೀಲ, ಸಂಪಾದಕರು, ಕವಿಮಾರ್ಗ
ಸೂಫಿಶರಣ, # 324/ಎ; ಜಿಡಿಎ ಬಡಾವಣೆ, ಕುಸನೂರ ರಸ್ತೆ
ಭವಾನಿ ಗುಡಿಯ ಹತ್ತಿರ, ಕಲಬುರಗಿ–585 105
ಮೊಬೈಲ್: 09480161734 Email: sufisharana@gmail.com



ಈ ಸಂಚಿಕೆಯ ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಆಯಾ ಲೇಖಕರವು.

# ಪರಿವಿಡಿ

* ಸಂಪಾದಕೀಯ ೦೩

– ಡಾ. ಕಲ್ಯಾಣರಾವ ಜಿ. ಪಾಟೀಲ

೦೧. ದೀಪಾವಳಿ : ಸಾಂಸ್ಕೃತಿಕ ನೋಟ ೦೭

– ಡಾ ಗುರುಲಿಂಗಪ್ಪ ಧಬಾಲೆ

೦೨. ಪುನರ್ಲೇಖನ ೧೧

– ಸುಮ. ವೈ

೦೩. ಕವಿರಾಜಮಾರ್ಗದಲ್ಲಿ ಸಾಮಾನ್ಯ ಮನುಷ್ಯನ ಚಿತ್ರಣ ೨೦

– ಶಾಂತಲಿಂಗ ಎಚ್. ಘಂಟೆ

೦೪. ವಡ್ಡಾರಾಧನೆ ಕೃತಿ ಅವಲೋಕನ ೨೮

– ಡಾ. ಎಸ್.ಬಿ. ರಾಠೋಡ

೦೫ ಕನ್ನಡ ಕಾವ್ಯಮೀಮಾಂಸೆ ಮತ್ತು ಪಂಪ ೩೪

– ಡಾ. ಶರಣಪ್ಪ ಸತ್ಯಂಪೇಟೆ

೦೬. ಪಂಪನ ನುಡಿಗಣಿ ೩೯

– ಡಾ. ತಿಪ್ಪೇರುದ್ರ ಸಂಡೂರು

೦೭. ಕನ್ನಡ ಕಾವ್ಯಗಳಲ್ಲಿ ದುರ್ಯೋಧನ ೪೭

– ಪ್ರೊ. ಆರ್.ಬಿ. ಅಮ್ಮಣ್ಣಿ

೦೮. ನಾಗಚಂದ್ರ : ಕುಳಗೇರಿಯ ನಂಟು ೫೦

– ಡಾ. ಅಮೃತಾ ಆರ್ ಕಟಕೆ

೦೯. ಹರಿಹರನ ರಗಳೆಗಳಲ್ಲಿ ಅವೈದಿಕ ಪ್ರಜ್ಞೆ ೫೬

– ವಿದ್ಯಾಸಾಗರ

೧೦. ಬಸವಣ್ಣನವರ ವಚನಗಳಲ್ಲಿ ಜೀವ ಮತ್ತು ಶರೀರ ೬೩

– ಮೇಘರಾಜ ಎಂ. ವಾಡಿ

೧೧. ನಿಜಶರಣನ ವೈಚಾರಿಕ ನಿಲುವು ೬೮

– ರಾಜಕುಮಾರ ಎಸ್. ಮಾಳಗೆ

೧೨. ಮೋಳಿಗೆಯ ಮಾರಯ್ಯ-ಮಹಾದೇವಮ್ಮ ದಂಪತಿಗಳು ೭೩

– ಡಾ. ನಿವೇದಿತಾ ಸ್ವಾಮಿ

 ISSN–2395-0978

# ೦೪. ವಡ್ಡಾರಾಧನೆ ಕೃತಿ ಅವಲೋಕನ

- ಡಾ. ಎಸ್.ಬಿ. ರಾಠೋಡ

ಕನ್ನಡ ಸಾಹಿತ್ಯ ಚರಿತ್ರೆಯ ಉಪಲಬ್ಧ ಕೃತಿಗಳಲ್ಲಿ ಅಮೋಘವರ್ಷ ನೃಪತುಂಗನ 'ಕವಿರಾಜಮಾರ್ಗ' ಅತಿ ಪ್ರಾಚೀನ ಪದ್ಯಗ್ರಂಥವಾದರೆ ಅದೇ ಕಾಲಘಟ್ಟದ ತುಸು ಹೆಚ್ಚು ಕಡಿಮೆ ಅಂದರೆ ೯ನೆಯ (ಕ್ರಿ.ಶ ೯೧೦) ಶತಮಾನದಲ್ಲಿ ರಚಿತವಾದ ಗದ್ಯ ಗ್ರಂಥವೆಂದರೆ ಶಿವಕೋಟಿಚಾರ್ಯನ 'ವಡ್ಡಾರಾಧನೆ' ಈ ಕೃತಿಯ ಸ್ವರೂಪ, ಕರ್ತೃತ್ವ, ರಚನಾ ಕಾಲ ವಿಷಯಗಳ ಬಗ್ಗೆ ಸಂಶೋಧಕರಿಗೆ ಸ್ವಲ್ಪ ಮಟ್ಟಿಗೆ ಕುತೂಹಲವನ್ನು ಮೂಡಿಸಿದೆ.

ವಡ್ಡಾರಾಧನೆಯೊಂದು ಜೈನ ಧರ್ಮ ಕಥಾ ಸಂಗ್ರಹವಿದ್ದು ಇದರಲ್ಲಿ ಒಟ್ಟು ಹತ್ತೊಂಬತ್ತು ಕಥೆಗಳಿವೆ. ಆರಾಧನೆಯೆಂದರೆ ಪೂಜೆ, ಸೇವೆ ಆಚರಣೆ ಮನನ ಇತ್ಯಾದಿ... ಆರಾಧನೆಯು ಕರ್ಮ ಕ್ಷಯ ಮತ್ತು ಮೋಕ್ಷ ಪ್ರಾಪ್ತಿಗಾಗಿ ಜೈನರಿಗಿರುವ ಪರಮಸಾಧನ. ಯಾವ ಜೀವ ಈ ಚತುರ್ವಿದ ಆರಾಧನೆಗಳನ್ನು ಆರಾಧಿಸಿ ಮರಣ ಸಮಯದಲ್ಲಿ ಸಲ್ಲೇಖನ ವೃತ್ತದಿಂದ ಅಂದರೆ "ಅನ್ನಪಾನಾದಿಗಳನ್ನು ತೊರೆದು, ಮರಣಕ್ಕೆ ನಿಮಿತ್ತವಾದ ದೈಹಿಕ ಮಾನಸಿಕ ಕ್ಲೇಶಗಳನ್ನು ದೃತ್ತಿಗೆಡದೆ ಸಹಿಸಿ ತದೇಕಚಿತ್ತದಿಂದ ದೇಹವನ್ನು ತ್ಯಜಿಸಿ, ಸದ್ಗತಿಯನ್ನು ಪಡೆಯಬೇಕೆಂದು ಪ್ರತಿಯೊಬ್ಬ ಜೈನ ಮುಮುಕ್ಷುವಿನ ಅಂತಿಮ ಧ್ಯೇಯ. ಇದು ಜೈನ ಮುನಿಗಳ ಸಲ್ಲೇಖನ ವ್ರತ ಈ ಕೃತಿಯಲ್ಲಿ ಈ ರೀತಿ ಸದ್ಗತಿಯನ್ನು ಪಡೆದ ೧೯ ಪುರಾಣ ಪುರುಷರ ಕಥೆಗಳಿವೆ.

**ಕೃತಿಯ ರಚನಾ ಕಾಲ:**

ವಡ್ಡಾರಾಧನೆಯ ಕಾಲವನ್ನು ನಿರ್ಧರಿಸಲು ಬಾಹ್ಯ ಆಧಾರವಾಗಲಿ ಕವಿ ಲಿಖಿತ ನೇರ ನಿರ್ದೇಶನವಾಗಲಿ ಇಲ್ಲ. ಹೀಗಾಗಿ ವಡ್ಡಾರಾಧನೆಯ ಕಾಲವನ್ನು ನಿಖರವಾಗಿ ಹೇಳುವದು ಸ್ವಲ್ಪ ತೊಡಕಿನ ವಿಚಾರವಾಗಿದೆ, ಆದರೂ ಹಲವು ವಿದ್ವಾಂಸರು ತಮ್ಮ ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಕೆ. ಬಿ. ಪಾಠಕರು ವಡ್ಡಾರಾಧನೆಯ ಕಾಲವನ್ನು ೧೧೮೮ ಎಂದು ಅಭಿಪ್ರಾಯಪಟ್ಟರೆ, ಕವಿ ಚರಿತ್ರೆಕಾರರು ಇದರ ಕಾಲವನ್ನು ೧೮೮೦ ಎಂದು ಹೇಳಿದ್ದಾರೆ. ಆದರೆ ಕೃತಿಯ ಕುರಿತು ಶ್ರಮಿಸಿದವರೆಂದರೆ ಮಂಜೇಶ್ವರ ಮತ್ತು ಗೋವಿಂದ ಪೈಇವರು ವಡ್ಡಾರಾದನೆ ೬ನೆಯ ಶತಮಾನಕ್ಕಿಂತ ಇತ್ತೀಚಿಗೆ ರಚಿತವಾದ ಕೃತಿಯೆಂದು ನಿರ್ಣಯಿಸಿದರು. ಈ ನಿರ್ಣಯವನ್ನು ತೆಗೆದುಕೊಳ್ಳಬೇಕಾದರೆ, ಕೃತಿಯಲ್ಲಿ



ISSN-2395-0978